**1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**<u>ಕ್ರಿಮಿನಲ್ ಪ್ರಕರಣ ಸಂಖ್ಯೆ: 2794/ 2016</u>**

**ಪಿರ್ಯಾದುದಾರರು:** **ಕುಂದಾಪುರ ಪೋಲಿಸ್ ಠಾಣೆ**

**ವಿರುದ್ಧ**

**ಆರೋಪಿತರುಗಳು:** **ರಮೇಶ ಎಸ್.**
**44 ವರ್ಷಗಳು,**
**ತಂದೆ: ದಿ. ಸಿದ್ದ ಆಚಾರ್,**
**ವಾಸ: ನಂಬ್ರ 18, 2ನೇ ತಿರುವು,**
**ಅನುಭವ ನಗರ, ನಾಗರಬಾವಿ,**
**ಬೆಂಗಳೂರು.**

**ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತರ ಹೇಳಿಕೆ**

**<u>ಪ್ರಶ್ನೆ:1</u>**- ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ ?
ಆರೋಪಿಯ ಉತ್ತರ:

**<u>ಪ್ರಶ್ನೆ:2</u>- ಪ್ರಾಸಾ-06 ಶ್ರೀಮತಿ ಜ್ಯೋತಿ** ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಮದುವೆಯ ಮಾತುಕತೆಗಾಗಿ ಏಪ್ರಿಲ್ 2005 ರಂದು ನಮ್ಮ ಮನೆಗೆ ಬಂದಿರುತ್ತಾರೆ. ಮಾತುಕತೆಯಾದ ನಂತರ ರೂಪಾಯಿ 5 ಲಕ್ಷ ಹಣ, 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ನೀಡಬೇಕೆಂದು ಬೇಡಿರುತ್ತಾರೆ. ಆ ಕಾಲಕ್ಕೆ ನನ್ನ ತಂದೆ ಇಲ್ಲದೆ ಅಣ್ಣ ತಮ್ಮಂದಿರೇ ಮದುವೆ ಮಾಡಬೇಕಾಗಿದ್ದು, ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ಸಂಬಂಧ ಮುಂದುವರೆಸುವುದಿಲ್ಲ ಎಂದು ಆರೋಪಿತರು ಹೇಳಿದಾಗ 20 ಪವನ್ ಚಿನ್ನ ಹಾಗೂ 2 ಲಕ್ಷ ಹಣ ಕೊಡಬೇಕೆಂದು ಕೇಳಿದಾಗ ಅದಕ್ಕೆ ಒಪ್ಪಿಕೊಂಡು ದಿ: 18-11-2005 ರಂದು ಕೊಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ 1ನೇ ಆರೋಪಿಯೊಂದಿಗೆ ವಿವಾಹವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?
ಆರೋಪಿಯ ಉತ್ತರ:

**<u>ಪ್ರಶ್ನೆ:3</u>- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಮದುವೆಗೂ ಮೊದಲು ಆರೋಪಿತರು ಮನೆಗೆ ಬಂದು ಅವರು ಬೇಡಿದ ವರದಕ್ಷಿಣೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ಮದುವೆಗೆ 24 ಪವನ್ ಚಿನ್ನ ಹಾಕಿದ್ದು, ಅದರಲ್ಲಿ ದೊಡ್ಡ ನೆಕ್ಲೇಸು, ಬಳೆಗಳು-8, 6 ಉಂಗುರಗಳು, 2 ಜೊತೆ ಕಿವಿಯೋಲೆ, ಲಾಂಗ್ ಚೈನು, 1ನೆ ಆರೋಪಿಗೆ ಒಂದು ಚಿನ್ನದ ಚೈನು, ಒಂದು ಬ್ರೇಸ್ ಲೈಟ್, ಚಿನ್ನದ ಒಂದು ಜನಿವಾರ ಹಾಕಿರುತ್ತಾರೆ. ಮದುವೆಯ ಖರ್ಚನ್ನು ನಾವೇ

ಭರಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:4- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಮದುವೆಯಾದ ನಂತರ ಬೆಂಗಳೂರಿನ ಅನುಭವ ನಗರಕ್ಕೆ ಕರೆದುಕೊಂಡು 1ನೇ ಆರೋಪಿಯೊಂದಿಗೆ ಸ್ವಂತ ಮನೆಯಲ್ಲಿ ವಾಸಿಸಲು ಹೋಗಿರುತ್ತೇನೆ. 4 ಮತ್ತು 5 ನೇ ಆರೋಪಿತರು ಪಕ್ಕದ ರಸ್ತೆಯಲ್ಲಿ ವಾಸವಿದ್ದು ಅವರು ಆಗಾಗ ಬಂದು ಹೋಗುತ್ತಿದ್ದರು. 2 ಮತ್ತು 3ನೇ ಆರೋಪಿತರು ಬೇರೆ ಮನೆಯಲ್ಲಿ ವಾಸವಿದ್ದರು, ಅವರು ಸಹ ಆಗಾಗ ಬಂದು ಹೋಗುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:5- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು 1ನೇ ಆರೋಪಿ ವ್ಯವಹಾರ ನಡೆಸುತ್ತಿದ್ದು, ಮದುವೆಯಾದ 2 ತಿಂಗಳ ನಂತರ ವರದಕ್ಷಿಣೆ ನೀಡಿರುವುದು ಸಾಲದು ಎಂದು ತಕರಾರು ತೆಗೆದಿದ್ದು, ಮದುವೆಗೆ ಹಾಕಿದ್ದ ಚಿನ್ನವನ್ನು 1ನೇ ಆರೋಪಿ ನೋಡಿ ಕೊಡುವುದಾಗಿ ಪಡೆದುಕೊಂಡು ಅನಂತರ ಈವರೆಗೂ ಹಿಂದಿರುಗಿಸಿಲ್ಲ. ಹಣವನ್ನು ವಾಪಸ್ಸು ಕೊಟ್ಟಿಲ್ಲ. ನಾನು ನ್ಯೂ ಹಾರಿಜಾನ್ ಕಾಲೇಜಿನಲ್ಲಿ ಲ್ಯಾಬ್ ಇನಸ್ಟ್ರಕ್ಟರ್ ಆಗಿ ಕೆಲಸ ಮಾಡುತ್ತಿದ್ದು, ನನ್ನ ಸಂಬಳ ಮತ್ತು ಡೆಬಿಟ್ ಕಾರ್ಡ ನ್ನು 1ನೇ ಆರೋಪಿ ಇಟ್ಟು ಕೊಂಡಿದ್ದು ನಾನು ನಿಷ್ಪ್ರಯೋಜಕಳು ಎಂದು ಅವಾಚ್ಯವಾಗಿ ನಿಂಧಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:6- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಆಗಾಗ ನನಗೆ ಹೊಡೆದು ಜೀವ ಬೆದರಿಕೆ ಹಾಕಿರುತ್ತಾರೆ. ಖಾಲಿ ಚೆಕ್ಕಿನ ಮೇಲೆ ನನ್ನ ಸಹಿ ಪಡೆದು ಅದನ್ನು ಬೇರೆಯವರಿಗೆ ಹಾಜರುಪಡಿಸಿ ಅಮಾನ್ಯಗೊಂಡಿದ್ದು ಸಿಸಿ ನಂಬ್ರ 1143/20009 ಶಿಕಾರಿಪುರದ ನ್ಯಾಯಾಲಯದಲ್ಲಿ ನನ್ನ ವಿರುದ್ದ ಆದೇಶವಾಗಿದ್ದು, ಅದರಲ್ಲಿ ಆದೇಶವಾಗಿರುವ ಮೊತ್ತವನ್ನು ನಾನು ಈಗ 1ನೇ ಆರೋಪಿಯ ಈ ವಂಚನೆಯಿಂದ ಪಾವತಿಸಬೇಕಾಗಿರುತ್ತದೆ. ಅಲ್ಲದೇ ನಾನು 1ನೇ ಆರೋಪಿಯ ವಿರುದ್ದ ಎಂ.ಸಿ ನಂಬ್ರ 4/2017ರಂತೆ ವಿವಾಹ ವಿಚ್ಛೇಧನೆಗಾಗಿ ಸಲ್ಲಿಸಿದ್ದ ಅರ್ಜಿಯಲ್ಲಿ ಯಾವುದೇ ಜೀವನಾಂಶ ನನ್ನ ಪರವಾಗಿ ಆದೇಶವಾಗಿರುವುದಿಲ್ಲ. ಸದ್ರಿ ಆದೇಶಗಳ ಪ್ರತಿಯನ್ನು ಮುಂದಕ್ಕೆ ಹಾಜರುಪಡಿಸುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:7- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಮೇಲೆ ಹೇಳಿದ್ದನ್ನು

ಹೊರತುಪಡಿಸಿ 4-5 ಖಾಲಿ ಚೆಕ್ಕುಗಳು ನಾನು ಸಹಿ ಮಾಡಿದ್ದು 1ನೇ ಆರೋಪಿಯ ಬಳಿಯೇ ಉಳಿದಿರುತ್ತದೆ. ಅನಾರೋಗ್ಯವಿದ್ದಾಗ ಎಂದಿಗೂ ಆರೋಪಿಯು ನನ್ನನ್ನು ನೋಡಿಕೊಂಡಿಲ್ಲದೆ, 2011ರಲ್ಲಿ ನನಗೆ ಶಸ್ತ್ರಚಿಕಿತ್ಸೆಯಾಗಿದ್ದು, ಆರೋಪಿ ಯಾವುದೇ ರೀತಿಯ ಉಪಚಾರ ಮಾಡಿರುವುದಿಲ್ಲ. ನನ್ನ ತಮ್ಮ ಬಂದು ಚಿಕಿತ್ಸೆಯ ವೆಚ್ಚವನ್ನು ಭರಿಸಿರುತ್ತಾರೆ. ಆರೋಪಿತರು ನನ್ನ ಮನೆಯವರನ್ನು ಕರೆಯಿಸಿ ಖರ್ಚು ವೆಚ್ಚವನ್ನು ಭರಿಸುವಂತೆ ಸೂಚಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:8</u>- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು 2013 ಮೇ ರಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದು, ಈ ಹಿನ್ನೆಲೆ ನನ್ನ ತಮ್ಮ ಬಂದು ವೈದ್ಯರ ಬಳಿ ಕುಂದಾಪುರದಲ್ಲಿ ಚಿಕಿತ್ಸೆ ಕೊಡಿಸುವುದಾಗಿ ನನ್ನನ್ನು ಕರೆ ತಂದಿದ್ದು ಆರೋಪಿಯು ಆತನ ಅನುಮತಿ ಇಲ್ಲದೆ ನನ್ನನ್ನು ಕರೆದುಕೊಂಡು ಹೋಗಿರುವುದಾಗಿ ಅಪಾದಿಸಿ ನನ್ನ ವಿರುದ್ದ ಅಸಂಬದ್ದ ಆಪಾದನೆಗಳನ್ನು ಹೊರಿಸಿ ವಿವಾಹ ವಿಚ್ಛೇಧನೆ ನೀಡುವುದಾಗಿ ನನ್ನ ಸಂಬಂಧಿಕರಿಗೆ ಹೇಳಿರುತ್ತಾನೆ. ಅನಂತರ ನಾನು ಗರ್ಭಿಣಿಯಾಗಿರುವ ವಿಚಾರ ತಿಳಿದು ಬಂದರೂ ಆ ಬಗ್ಗೆ ನನ್ನ ಕಾಳಜಿ ವಹಿಸದೆ ಮನೆ ಬಿಟ್ಟು ಹೋಗಿದ್ದು ವಾಪಸ್ಸು ಬರಬಾರದಂತೆ ತಿಳಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:9</u>- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಅನಂತರ ಸೀಮಂತ ಕಾರ್ಯಕ್ರಮ ಮಾಡುವುದಾಗಿ ಆರೋಪಿತರು ಕರೆದುಕೊಂಡು ಹೋಗಿದ್ದು ಅದಕ್ಕೂ ಮೊದಲು ಆರೋಪಿಯ ಸಂಬಂಧಿ ಮಧ್ಯಸ್ಥಿತಿಕೆ ವಹಿಸಿ ರಾಜಿ ಮಾಡಿಸುವುದಾಗಿ ತಿಳಿಸಿದ ಮೇರೆಗೆ ನಾನು ಒಪ್ಪಿ ಅಲ್ಲಿಗೆ ಹೋಗಿದ್ದು ಆಗಲೂ ಮಾನಸಿಕವಾಗಿ ಕಿರುಕುಳ ನೀಡಿದ್ದು ನಾನು ತಾಳಲಾರದೆ ವಾಪಸ್ಸು ತಾಯಿ ಮನೆಗೆ ಬಂದಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:10</u>- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ದಿಃ 27-12-2013 ರಂದು ನಾನು ಗಂಡು ಮಗುವಿಗೆ ಜನ್ಮ ನೀಡಿರುತ್ತೇನೆ. ಕುಂದಾಪುರದಲ್ಲಿ ಮಗುವಿನ ನಾಮಕರಣ ಮಾಡಲು ಮೇಲೆ ಹೇಳಿದ ಆರೋಪಿಯ ಸಂಬಂಧಿ ಮಧ್ಯಸ್ಥಿಕೆ ವಹಿಸಿ ನಾಮಕರಣವನ್ನು ಮಾಡಿರುತ್ತೇವೆ. ಆದಾಗಿ 4 ತಿಂಗಳ ನಂತರ ಆರೋಪಿಯ ಸಂಬಂಧಿಯಾದ ಮುಕುಂದರವರು ಮೃತಪಟ್ಟಿದ್ದು ಅನಂತರ ಆರೋಪಿಯೊಂದಿಗೆ ಯಾವುದೇ ಸಂಪರ್ಕ ಇರಲಿಲ್ಲ. ನನ್ನನ್ನು ಮತ್ತು ಮಗುವನ್ನು ವಾಪಸ್ಸು ಕರೆದುಕೊಂಡು ಹೋಗಬೇಕಾದರೆ ರೂಪಾಯಿ 2 ಲಕ್ಷ ಹಣವನ್ನು ಕೊಡಬೇಕೆಂದು ಪುನಃ

ಬೇಡಿಕೆ ಇಟ್ಟಿರುತ್ತಾನೆ. ಅನಂತರದಲ್ಲಿ ನನ್ನನ್ನು ಮತ್ತು ನನ್ನ ಮಗುವನ್ನು ನೋಡಲು ಬಂದಿರುವುದಿಲ್ಲ. ಈ ವರೆಗೂ ನಮ್ಮ ಯಾವುದೇ ಖರ್ಚು ವೆಚ್ಚವನ್ನು ಆರೋಪಿ ಭರಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:4- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ದಿಃ 26-04-2016 ರಂದು ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ದಿಃ 16-05-2016 ರಂದು ಪೊಲೀಸರು ಕುಂದಾಪುರದ ನಮ್ಮ ಮನೆಗೆ ಭೇಟಿ ನೀಡಿ ಪಂಚನಾಮೆಯನ್ನು ಜರುಗಿಸುವ ವೇಳೆಗೆ ಚಾಸಾ-10 ಮತ್ತು 11 ರವರು ಹಾಜರು ಇದ್ದು, ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 10.00 ರಿಂದ 11.00 ರವರೆಗೂ ಜರುಗಿಸಿ ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:11- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ದಿಃ 15-06-2016 ರಂದು ಬೆಂಗಳೂರಿನ ಆರೋಪಿಯ ಮನೆಗೆ ಪೊಲೀಸರನ್ನು ಕರೆದುಕೊಂಡು ಹೋಗಿದ್ದು ಪಂಚರಾಗಿ ಚಾಸಾ-2 ಮತ್ತು 12 ರವರು ಹಾಜರು ಇದ್ದರು. ಸದ್ರಿ ಕ್ರಮವನ್ನು ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೂ ಜರುಗಿಸಿ ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:12- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ದಿಃ 31-07-2016 ರಂದು ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಮದುವೆಯ ದಾಖಲಾತಿಗಳನ್ನು ಹಾಜರುಪಡಿಸುವ ವೇಳೆಗೆ ಪಂಚನಾಮೆಯನ್ನು ಪಂಚರಾದ ಚಾಸಾ-11 ರವರ ಸಮಕ್ಷಮ ನಾನು ಚಿನ್ನ ಖರೀಧಿಸಿದ ಬಗ್ಗೆ ಹಾಜರುಪಡಿಸಿದ ರಶೀದಿಗಳು, ವಿವಾಹದ ಆಮಂತ್ರಣ ಪತ್ರ, ಪೋಟೋಗಳು, ಸರಸ್ವತಿ ಕಲ್ಯಾಣ ಮಂಟಪದ ರಶೀದಿ, ಮಗು ಜನನವಾದ ಬಗ್ಗೆ ರಶೀದಿಗಳು, ಜನನ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಕ್ರಮವನ್ನು ಸಂಜೆ 5.05 ರಿಂದ 6.00 ಗಂಟೆಯವರೆಗೂ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:13- ಪ್ರಾಸಾ-01 ಶ್ರೀಮತಿ ಜ್ಯೋತಿ** ರವರು ಮುಂದುವರೆದು ಅನಂತರ 1 ಮತ್ತು 3ನೇ ಆರೋಪಿತರ ಸಮಕ್ಷಮ 2ನೇ ಆರೋಪಿಯು ನನಗೆ ಹೊಡೆದಿದ್ದು, 4 ಮತ್ತು 5ನೇ ಆರೋಪಿತರು

ಕುಮ್ಮಕ್ಕು ನೀಡಿರುತ್ತಾರೆ. 2ನೇ ಆರೋಪಿ ವಿರುದ್ದ ಈ ಪ್ರಕರಣವನ್ನು ಕೈಬಿಡಲಾಗಿರುತ್ತದೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲದೆ 2 ರಿಂದ 5ನೇ ಆರೋಪಿತರ ವಿರುದ್ದ ಕ್ರಮ ಕೈಗೊಳ್ಳಬೇಕಾಗಿ ಕೋರಿಕೊಳ್ಳುತ್ತೇನೆ. ಈಗ ನನ್ನ ಮತ್ತು ಮಗನ ಖರ್ಚು ವೆಚ್ಚವನ್ನು ನನ್ನ ತಾಯಿ ಮನೆಯವರು ನೋಡಿಕೊಳ್ಳುತ್ತಿದ್ದಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

<u>**ಪ್ರಶ್ನೆ:14**</u>**- ಪ್ರಾಸಾ-02 ಶ್ರೀಮತಿ ಜಯಂತಿ** ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ನನ್ನ ಮಗಳು ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 20 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-3 ರಿಂದ 5 ರವರು ಇದ್ದೇವು. ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

<u>**ಪ್ರಶ್ನೆ:15**</u>**- ಪ್ರಾಸಾ-02ಶ್ರೀಮತಿ ಜಯಂತಿ** ರವರು ಮುಂದುವರೆದು ದಿಃ 18-11-2005 ರಂದು ಕೋಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

<u>**ಪ್ರಶ್ನೆ:16**</u>**- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ.

ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೇ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:17</u>- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರು ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನನ್ನ 2ನೇ ಮಗ ಎಲ್ಲಾ ಖರ್ಚುಗಳನ್ನು ಭರಿಸಿರುತ್ತಾರೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:18</u>- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು ಚಾಸಾ-1 ರವರಿಗೆ ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ತನ್ನ ಸಹೋದರ ಕಿರಣ್ ರವರಿಗೆ ತಿಳಿಸಿದ್ದು ಅದರಂತೆ ಸದ್ರಿ ಕಿರಣ್ ರವರು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿದ್ದರು. ಇಲ್ಲಿ ತೋರಿಸಿದಾಗ ಚಾಸಾ-1ರವರು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:19</u>- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ

ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು. ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:20</u>- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು 1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ಧ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು. ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:21</u>- ಪ್ರಾಸಾ-02 ಶ್ರೀಮತಿ ಜಯಂತಿ** ರವರು ಮುಂದುವರೆದು ನಿಪಿ-3, ನಿಪಿ-4 ಮತ್ತು 5 ರಲ್ಲಿ ಸಹಿಯನ್ನು ದಿಃ 15-06-2016ರಂದು ಆರೋಪಿಯ ಮನೆಯಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ಮತ್ತು 12 ರವರು ಹಾಜರು ಇದ್ದರು. ಮಧ್ಯಾಹ್ನ 12-15 ರಿಂದ 1 ಗಂಟೆಯವರೆಗೂ ಪಂಚನಾಮೆ ಜರುಗಿಸಿ ಪೋಟೋ ತೆಗೆದಿರುತ್ತಾರೆ. ಮದುವೆಯಾದ ಸ್ವಲ್ಪ ದಿನಗಳ ನಂತರ 1ನೇ ಆರೋಪಿಯು ಚಾಸಾ-1ರವರ ಒಡವೆಗಳನ್ನು ಮುತ್ತೂಟು ಫೈನಾನ್ಸ್ ನಲ್ಲಿ ಅಡಮಾನ ಇಟ್ಟಿದ್ದರು. ಆರೋಪಿಯು ಪೂರ್ತಿ ಚಿನ್ನವನ್ನು ಆತನೇ ತೆಗೆದುಕೊಂಡಿರುತ್ತಾನೆ. ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ. ಆರೋಪಿಗಳು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಚಿತ್ರ ಹಿಂಸೆ ನೀಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:22</u>- ಪ್ರಾಸಾ-03 ಶ್ರೀ ಗಣೇಶ ಆಚಾರ್** ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರ ಮನೆಯವರು ಚಿನ್ನವನ್ನು ನನ್ನಲ್ಲೇ ಮಾಡಿಸುವುದು. ಅದರಂತೆ ಚಾಸಾ-1ರವರ ಮದುವೆಗೆ ಕೊಟ್ಟಂತಹ 24 ಪವನ್ ಚಿನ್ನವನ್ನು ನಾನೇ ಮಾಡಿರುತ್ತೇನೆ. ನನ್ನ ಅಂಗಡಿಯು ಚಾಸಾ-1 ರವರ

ಮನೆಯ ಹತ್ತಿರ ಬರುವುದರಿಂದ ಅವರ ಮನೆಯವರು ನನಗೆ ಭೇಟಿಯಾಗುತ್ತಿದ್ದರು. ಚಾಸಾ-1 ರವರಿಗೆ ಮಾಡಿಕೊಟ್ಟಿದ್ದ ಚಿನ್ನವನ್ನು ಹುಡುಗನ ಕಡೆಯವರು ನಮಗೆ ವಾಪಸ್ಸು ಕೊಟ್ಟಿರುವುದಿಲ್ಲ ಎಂದು ಹೇಳಿದ್ದರು. ಅನಂತರ ಅವರ ಮುಖಾಂತರವೇ ವಿವಾಹ ವಿಚ್ಛೇಧನಕ್ಕೆ ಅರ್ಜಿ ಹಾಕಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಚಾಸಾ-1ರವರ ಗಂಡ ಹೆಚ್ಚಿನ ವರದಕ್ಷಿಣೆಗೆ ಹಾಗೂ ಚಿನ್ನಕ್ಕೆ ಪೀಡಿಸುತ್ತಿದ್ದರು ಎಂದು ನನಗೆ ಚಾಸಾ-1ರವರ ಮನೆಯಿಂದ ಗೊತ್ತಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:23</u>- ಪ್ರಾಸಾ-03 ಶ್ರೀ ಗಣೇಶ ಆಚಾರ್** ರವರು ಮುಂದುವರೆದು ಸುಮಾರು 6-7 ವರ್ಷಗಳ ನಂತರ ಚಾಸಾ-1 ರವರು ಗಂಡನ ಮನೆಯನ್ನು ಬಿಟ್ಟು ವಾಪಸ್ಸು ಬಂದಿರುತ್ತಾರೆ ಎಂದು ತಿಳಿಸಿರುತ್ತಾರೆ. 2013ರಲ್ಲಿ ಚಾಸಾ-1 ರವರಿಗೆ ಮಗು ಆಗಿರುತ್ತದೆ ಎಂಬ ವಿಷಯ ಗೊತ್ತಾಗಿರುತ್ತದೆ. ಚಾಸಾ-1 ಮತ್ತು 1ನೇ ಆರೋಪಿ ನಡುವೆ ವೈಮನಸ್ಸು ಇದ್ದ ಕಾರಣ ನಾಮಕರಣಕ್ಕೆ ಅವರ ಸಂಬಂಧಿಕರು ಕರೆದುಕೊಂಡು ಬಂದಿದ್ದರು ಎಂಬ ವಿಷಯ ತಿಳಿಯಿತು. ಆರೋಪಿಗಳು ಕುಂದಾಪುರಕ್ಕೆ ಬಂದು ಚಾಸಾ-1 ರವರಿಗೆ ತೊಂದರೆ ಕೊಡುತ್ತಿದ್ದರು ಎಂಬ ವಿಷಯ ನನಗೆ ತಿಳಿದಿರುತ್ತದೆ. ಪೊಲೀಸರು ನನಗೆ ಚಾಸಾ-1 ರವರಿಗೆ ಚಿನ್ನ ಮಾಡಿಕೊಟ್ಟ ಬಗ್ಗೆ ಕೇಳಿದ್ದು ಸದ್ರಿ ವಿಷಯವನ್ನು ಮಾತ್ರ ನಾನು ಪೊಲೀಸರಿಗೆ ಹೇಳಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:24</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 18-11-2005 ರಂದು ಚಾಸಾ-1 ಮತ್ತು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 24 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-2, 4 ಮತ್ತು 5 ರವರು ಇದ್ದೇವು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:25</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ದಿಃ 18-11-2005 ರಂದು ಕೊಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ

ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಹಾಗೂ ಒಂದು ದೊಡ್ಡ ಚೈನು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:26</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ. ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೇ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:27</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನನ್ನ ತಮ್ಮ ಕಿರಣ್ ಆಚಾರ್ಯರವರು ಎಲ್ಲಾ ಖರ್ಚುಗಳನ್ನು ಭರಿಸಿರುತ್ತಾರೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:28</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ಚಾಸಾ-1ರವರಿಗೆ

ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಪೊರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ತನ್ನ ಸಹೋದರ ಕಿರಣ್ ರವರಿಗೆ ತಿಳಿಸಿದ್ದು ಅದರಂತೆ ಸದ್ರಿ ಕಿರಣ್ ರವರು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿದ್ದರು. ಇಲ್ಲಿ ತೋರಿಸಿದಾಗ ಚಾಸಾ-1ರವರು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:29</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ದಿಃ 28-12-2013ರಂದು ಆರೋಪಿಗಳು ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:30</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು 1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ದ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:31</u>- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು

ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ. ದೂರನ್ನು ಕೊಡುವ ಮೊದಲು ಆರೋಪಿಗಳು ಮನೆಯ ಹತ್ತಿರ ಬಂದು ನಾನು 2ನೇ ಮದುವೆಯಾಗುತ್ತೇನೆ ತೊಂದರೆ ಕೊಡಲು ಬಂದರೆ ನಿನ್ನನ್ನು, ನಿನ್ನ ತಾಯಿ ಹಾಗೂ ಸಹೋದರರನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ರೂಪಾಯಿ 2 ಲಕ್ಷ ಹಣ ಹಾಗೂ 24 ಪವನ್ ಚಿನ್ನವನ್ನು ಇದುವರೆಗೂ ವಾಪಸ್ಸು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:32- ಪ್ರಾಸಾ-04 ಶ್ರೀ ಪ್ರಸನ್ನ ಆಚಾರ್** ರವರು ಮುಂದುವರೆದು ಚಾಸಾ-1 ಮತ್ತು ಅವರ ಮಗುವನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ದಿಃ 16-05-2016 ರಂದು ಪೊಲೀಸರು ಮಹಜರಿಗೆ ಮನೆಯ ಹತ್ತಿರ ಬಂದಿದ್ದರು. ಚಿನ್ನಾಭರಣವನ್ನು ಗಾಯತ್ರಿ ಜ್ಯುವೆಲ್ಲರ್ ಕುಂದಾಪುರದಲ್ಲಿ ಮಾಡಿಸಿರುತ್ತೇವೆ. ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:33- ಪ್ರಾಸಾ-05 ಶ್ರೀ ಕಿರಣ್** ರವರು ತಮ್ಮ ಸಾಕ್ಷ್ಯದಲ್ಲಿ ದಿಃ 18-11-2005 ರಂದು ಚಾಸಾ-1 ಮತ್ತು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 24 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-2, 3 ಮತ್ತು 5 ರವರು ಇದ್ದೇವು. ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**ಪ್ರಶ್ನೆ:34- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ದಿಃ 18-11-2005 ರಂದು ಕೋಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಹಾಗೂ ಒಂದು ದೊಡ್ಡ ಚೈನು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು

ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:35</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ. ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೆ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:36</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿದ್ದರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನಾನು ಎಲ್ಲಾ ಖರ್ಚುಗಳನ್ನು ಭರಿಸಿರುತ್ತೇನೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:37</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ಚಾಸಾ-1ರವರಿಗೆ ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಪೋರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ನನಗೆ ತಿಳಿಸಿದ್ದು ಅದರಂತೆ ನಾನು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿರುತ್ತೇನೆ. ಇಲ್ಲಿ ತೋರಿಸಿದಾಗ ಚಾಸಾ-1ರವರು

ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆಃ38</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ದಿಃ 28-12-2013ರಂದು ಆರೋಪಿಗಳು ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು. ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆಃ39</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು 1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ಧ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆಃ40</u>- ಪ್ರಾಸಾ-05 ಶ್ರೀ ಕಿರಣ್** ರವರು ಮುಂದುವರೆದು ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ. ದೂರನ್ನು ಕೊಡುವ ಮೊದಲು ಆರೋಪಿಗಳು ಮನೆಯ ಹತ್ತಿರ ಬಂದು ನಾನು 2ನೇ ಮದುವೆಯಾಗುತ್ತೇನೆ ತೊಂದರೆ ಕೊಡಲು ಬಂದರೆ ನಿನ್ನನ್ನು, ನಿನ್ನ ತಾಯಿ ಹಾಗೂ ಸಹೋದರರನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ರೂಪಾಯಿ 2 ಲಕ್ಷ ಹಣ ಹಾಗೂ 24 ಪವನ್ ಚಿನ್ನವನ್ನು ಇದುವರೆಗೂ ವಾಪಸ್ಸು ಕೊಟ್ಟಿರುವುದಿಲ್ಲ. ಚಾಸಾ-1 ಮತ್ತು ಅವರ ಮಗುವನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ದಿಃ 16-05-2016 ರಂದು ಪೊಲೀಸರು ಮಹಜರಿಗೆ ಮನೆಯ ಹತ್ತಿರ ಬಂದಿದ್ದರು. ಚಿನ್ನಾಭರಣವನ್ನು ಗಾಯತ್ರಿ ಜ್ಯುವೆಲ್ಲರ್ ಕುಂದಾಪುರದಲ್ಲಿ ಮಾಡಿಸಿರುತ್ತೇವೆ. ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು

ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:41</u>- ಪ್ರಾಸಾ-06 ಶ್ರೀ ಉದಯ ಆಚಾರ್** ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ-2 ರಲ್ಲಿರುವ ಸಹಿಯನ್ನು ದಿಃ 16-05-2016 ರಂದು ಬೆಳಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ಪಂಚನಾಮೆಗೆ ಪೊಲೀಸರು ಚಾಸಾ-2ರವರ ಮನೆಗೆ ಕರೆದಿದ್ದು ಚಾಸಾ-1 ರವರು ಸ್ಥಳವನ್ನು ತೋರಿಸಿದಂತೆ ನನ್ನ ಹಾಗೂ ಚಾಸಾ-11 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:42</u>- ಪ್ರಾಸಾ-07 ಶ್ರೀ ಮಹೇಶ** ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ-2 ರಲ್ಲಿರುವ ಸಹಿಯನ್ನು ದಿಃ 16.05.2016 ರಂದು ಬೆಳಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ಪಂಚನಾಮೆಗೆ ಪೊಲೀಸರು ಚಾಸಾ-2ರವರ ಮನೆಗೆ ಕರೆದಿದ್ದು ಚಾಸಾ-1 ರವರು ಸ್ಥಳವನ್ನು ತೋರಿಸಿದಂತೆ ನನ್ನ ಹಾಗೂ ಚಾಸಾ-10 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:43</u>- ಪ್ರಾಸಾ-08 ಶ್ರೀಮತಿ ಗೀತಾ ಆಚಾರ್ಯ** ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ-3 ರಲ್ಲಿರುವ ಸಹಿಯನ್ನು ದಿಃ 15.06.2016 ರಂದು ಆರೋಪಿಯ ಮನೆಯಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-1, 2 ಮತ್ತು ನಾನು ಹಾಜರು ಇದ್ದೇವು. ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೂ ಪಂಚನಾಮೆ ಜರುಗಿಸಿ ಪೋಟೋ ತೆಗೆದಿರುತ್ತಾರೆ. ಸದ್ರಿ ಜಾಗವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

**<u>ಪ್ರಶ್ನೆ:44</u>-** ನೀವು ಹೇಳುವುದು ಏನಾದರೂ ಇದೆಯೇ ?

ಆರೋಪಿಯ ಉತ್ತರಃ

**<u>ಪ್ರಶ್ನೆ:45</u>-** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

ಆರೋಪಿಯ ಉತ್ತರಃ

( ಈ ಮೇಲ್ಕಂಡ ಆರೋಪಿತರ ಹೇಳಿಕೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 14.07.2026 ರಂದು ಸಹಿ ಮಾಡಿರುತ್ತಾರೆ. )

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಆರೋಪಿ ಸಹಿ.